ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ

ನ್ಯಾಯಾಲಯ, ತಿ.ನರಸೀಪುರ

**ಸಿ.ಸಿ. 133/2020**

| | | | | |
|---|---|---|---|---|
| 1 | ಹೆಸರು | ಪುಟ್ಟಸ್ವಾಮಿ | ಸಿ ಡಬ್ಲೂ | 3 |
| 02 | ತಂದೆಯ ಹೆಸರು | ಚಿಂದಗಿರಿಗೌಡ | ಪಿಡಬ್ಲೂ | 4 |
| 03 | ವಯಸ್ಸು | 40 | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ಪೋಲೀಸ್ ಶಸ್ತ್ರ ಮುಖ್ಯ ಪೇದೆ | 05.11.2025 | |
| 05 | ಊರು | ಬನ್ನೂರು | | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು 2015 ರಿಂದ ಏಪ್ರಿಲ್ 2022 ರವರೆಗೂ ಬನ್ನೂರು ಪೋಲೀಸ್ ಠಾಣೆಯಲ್ಲಿ ಪೋಲೀಸ್ ವಾಹನದ ಚಾಲಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 10.02.2020 ರಂದು ಮಧ್ಯಹ್ನ 01.00 ಗಂಟೆಗೆ ಚಾ.ಸಾ. 1, 2,4 ಮತ್ತು 5 ನೇ ರವರು ಮತ್ತು ನಾನು ನಮ್ಮ ಇಲಾಖಾ ವಾಹನ ಸಂಖ್ಯೆಕೆ ಎ 55–ಜಿ–114 ನ ಚಾಲಕನಾಗಿದ್ದು , ಬನ್ನೂರು ಪೋಲೀಸ್ ಠಾಣಾ ಸರಹದ್ದು , ಕೊಡಗಹಳ್ಳಿ ಗ್ರಾಮದ ಬಳಿ ಗಸ್ತಿನಲ್ಲಿದ್ದಾಗ ಚಾ.ಸಾ. 1 ನೇ ರವರಿಗೆ ಬನ್ನೂರು ಸಂತೆ ಮಾಳದಿಂದ ಹನುಮನಾಳು ಕಡೆಗೆ ಒಬ್ಬ ವ್ಯಕ್ತಿ ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಅಕ್ರಮವಾಗಿ ಮಧ್ಯವನ್ನು ಯಾವುದೋ ಪ್ಯಾಸೆಂಜರ್ ಆಟೋದಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ನಾವು ಪಂಚರನ್ನು ಜೊತೆಯಲ್ಲಿ ಕರೆದುಕೊಂಡು ಮಧ್ಯಾಹ್ನ 01.30 ಗಂಟೆ ಸಮಯದಲ್ಲಿ ಹನುಮನಾಳು ಬಸ್ಸ ನಿಲ್ದಾಣದ ಸ್ವಲ್ಪ ಮುಂದೆ ತಿರುವಿನಲ್ಲಿ ಮರೆಯಲ್ಲಿ ಜೀಪನ್ನು ನಿಲ್ಲಿಸಿ ಕಾಯುತ್ತಿದ್ದಾಗ ಮಧ್ಯಾಹ್ನ 01.45 ಗಂಟೆಗೆ ಬನ್ನೂರು ಕಡೆಯಿಂದ ಒಂದು ಪ್ಯಾಸೆಂಜರ್ ಆಟೋ ಬಂದು ಹನುಮನಾಳು ಬಸ್ಸ ನಿಲ್ದಾಣದಲ್ಲಿ ನಿಲ್ಲಿಸಿದ್ದು , ಅದರಿಂದ ಒಬ್ಬ ವ್ಯಕ್ತಿ ಬಿಳಿ ಪ್ಲಾಸ್ಟಿಕ್ ಚೀಲವನ್ನು ಕೈಯಲಿ ಹಿಡಿದು ಬರುತ್ತಿದ್ದದ್ದನ್ನು ನೋಡಿ ಆತನನ್ನು ತಡೆದು ನಿಲ್ಲಿಸಿ

ವಿಚಾರಿಸಲಾಗಿ ಆತನ ಹೆಸರು ಸಿದ್ದೇಗೌಡ ಬಿನ್ ಲೇಟ್ ಭದ್ರೇ ಹೊಂಬಯ್ಯ , 53 ವರ್ಷ , ಅಂಗಡಿ ವ್ಯಾಪಾರ , ಹನುಮನಾಳು ಗ್ರಾಮ ಎಂದು ತಿಳಿಸಿರುತ್ತಾನೆ. ನಂತರ ಪಂಚರ ಸಮಕ್ಷವು ಚಾ,ಸಾ. 1 ನೇ ರವರು ಸದರಿ ವ್ಯಕ್ತಿಯ ಬಳಿ ಇದ್ದ ಪ್ಲಾಸ್ಟಿಕ್ ಚೀಲವನ್ನು ತೆಗದು ನೋಡಲಾಗಿ ಅದರಲ್ಲಿ 180 ಎಂ ಎಲ್ ನ 17 High Wards cheers Whisky ಯ ಶಾಶೆಟ್ ಗಳು ಕಂಡು ಬಂದಿದ್ದು ಅವುಗಳ ಒಟ್ಟು ಮೊತ್ತ 1030.88 ಗಳಾಗಿರುತ್ತದೆ. ಸದರಿ ಮಧ್ಯವನ್ನು ಆರೋಪಿ ಯಾವುದೇ ಪರವಾನೆಗೆ ಇಲ್ಲದೆ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿರುವುದು ನಮಗೆ ತಿಳಿದು ಬಂದಿರುತ್ತದೆ. ನಂತರ ಚಾ,ಸಾ. 1 ನೇ ರವರು ಮಧ್ಯಾಹ್ನ 02.15 ಗಂಟೆಯಿಂದ 03.00 ಗಂಟೆವರೆಗೆ ಮಹಜರ್ ಕ್ರಮ ಜರುಗಿಸಿ ವಶ ಪಡಿಸಿಕೂಂಡ ಮಧ್ಯದ ಪೌಚ್ ಗಳನ್ನು ಬಿಳಿಯ ಬಟ್ಟೆ ಚೀಲದಲ್ಲಿ ಹಾಕಿ A ಎಂಬ ಇಂಗ್ಲಿಷ್ ಅಕ್ಷರದ ಮೊಹರು ಹಾಕಿ ನಮ್ಮ ಮತ್ತು ಪಂಚರ ಸಹಿ ಉಳ್ಳ ಚೀಟಿ ಅಂಟಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ ಆರೋಪಿ ಮತ್ತು ವಶ ಪಡಿಸಿಕೊಂಡ ಮುದ್ದೆ ಮಾಲುಗಳು ಮತ್ತು ವರದಿಯೊಂದಿಗೆ ಠಾಣಾಧಿಕಾರಿಗೆ ಚಾಸಾ. 1 ನೇ ರವರು ಹಾಜರುಪಡಿಸಿರುತ್ತಾರೆ. ಅದರಂತೆ ಆರೋಪಿಯ ವಿರುದ್ಧ ಮೊಕದ್ದಮೆ ದಾಖಲಿಸಿದ್ದು , ತನಿಖೆಯ ಸಂಧರ್ಬದಲ್ಲಿ ತನಿಖಾಧಿಕಾರಿಗಳು ನನ್ನ ಹೇಳಿಕೆಯನ್ನು ಪಡೆದುಕೂಂಡಿರುತ್ತಾರೆ. ನ್ಯಾಯಾಲಯದಲ್ಲಿರುವ ಮುದ್ದೆಮಾಲುಗಳು ಮತ್ತು ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಕೆ ಕೆ ಎನ್ ವಕೀಲರಿಂದಃ**

ಚಾ.ಸಾ. 1 ನೇ ರವರು ನನ್ನ ಮೇಲಾಧಿಕಾರಿ ಇರುತ್ತಾರೆ ಎಂದರೆ ಸರಿ . ಅದೇ ರೀತಿ ಚಾ,ಸಾ.2 ನನ್ನ ಸಹೋದ್ಯೂಗಿ ಇರುತ್ತಾರೆ ಎಂದರೆ ಸರಿ . ಚಾ,ಸಾ. 1 ನೇ ರವರಿಗೆ ಸದರಿ ಬಾತ್ಮಿ ಬಂದಿರುತ್ತದೆ. ಆ ಸಂಧರ್ಬದಲ್ಲಿ ನಾವು ಕೊಡಗಹಳ್ಳಿ ಗ್ರಾಮದ ಬಳಿ ಗಸ್ತು ಕರ್ತವ್ಯದಲ್ಲಿದ್ದೆವು. ನಮಗೆ

ಬಾತ್ಮಿ ಬಂದಾಗ 12.30 ರಿಂದ 01.00 ಗಂಟೆ ಸಮಯ ಆಗಿತ್ತು. ನಾವು 01.10 ಗಂಟೆಗೆ ಅಲ್ಲಿಂದ ಬಿಟ್ಟಿರುತ್ತೇವೆ. ಕೊಡಗಹಳ್ಳಿಯಿಂದ ನಾವು ಹನುಮನಾಳು ಗ್ರಾಮಕ್ಕೆ ಬಂದಿರುತ್ತೇವೆ. ನಾವು ಕೊಡಗಹಳ್ಳಿಯಿಂದ ಬಿ ಸೀಹಳ್ಳಿ ಮತ್ತು ಭುಗತಹಳ್ಳಿ ಮಾರ್ಗವಾಗಿ ಹನುಮನಾಳು ಗ್ರಾಮಕ್ಕೆ ಹೋಗಿರುತ್ತೇವೆ. ನಾನು , ಚಾ,ಸಾ. 1 , 2 ಮತ್ತು ಪಂಚರು ಅಲ್ಲಿಗೆ ಹೋಗಿರುತ್ತೇವೆ. ಸದರಿ ಪಂಚರು ಹನುಮನಾಳು ಗ್ರಾಮದವರು ಇರುತ್ತಾರೆ. ನಾವು ಹನುಮನಾಳು ಗ್ರಾಮದಲ್ಲಿ ಸದರಿ ಪಂಚರನ್ನು ನಮ್ಮಾಂದಿಗೆ ಕರೊಕೊಂಡಿರುತ್ತೇವೆ. ನಾವು ಹನುಮನಾಳು ಗ್ರಾಮಕ್ಕೆ ತಲುಪುವಾಗ ಸಮಯ 01.30 ಗಂಟೆ ಆಗಿತ್ತು. ನಾನು ವಾಹನದ ಚಾಲಕನಿರುವ ಕಾರಣ ನಾನು ಜೀಪಿನಲ್ಲೇ ಇದ್ದು , ಉಳಿದವರು ಘಟನೆ ಸ್ಥಳದ ಬಳಿ ಇದ್ದರು. ಹಾಗಾಗಿ ನನಗೆ ಸದರಿ ಘಟನಾ ಸ್ಥಳದಲ್ಲಿ ನಡೆದ ಸಂಗತಿಗಳು ಗೊತ್ತಿಲ್ಲ ಎಂದರೆ ಸರಿ . ನಾನು ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾ. 1 ನೇ ರವರಿಗೆ ಸಹಾಯ ಮಾಡುವ ಉದ್ದೇಶಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.